https://www.kuvempuonline.com

**QP CODE 10301 A**



**ತೃತೀಯ ಸೆಮಿಸ್ಟರ್ ಬಿ.ಎ/ಬಿ.ಎಸ್ಸಿ/ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆ**

**ಏಪ್ರಿಲ್/ಮೇ 2019**

**ಕನ್ನಡ ಭಾಷಾ ಪತ್ರಿಕೆ – 3**

*(ಹೊಸಬರಿಗೆ) (೨೦೧೪-೧೫ನೇ ಸಾಲಿನ ವಿದ್ಯಾರ್ಥಿಗಳಿಗೆ)*

**SAC/SSC/SWC – 010: ನುಡಿ ಸಂಪದ – 3**

*ಸಮಯ: 3 ಗಂಟೆಗಳು]* *[ಗರಿಷ್ಠ ಅಂಕಗಳು: 80*

**1.** *ಅ. ಒಂದು ಪದ್ಯದ ಭಾವ ಸ್ವಾರಸ್ಯವನ್ನು ಬರೆಯಿರಿ:* 1 x 6 = 06

೧. ಹೇಳು ಗೆಳೆಯ
ನಿನಗನ್ನಿಸುವುದಿಲ್ಲವೇ
ನಿನ್ನ ಕನಸಿಗೆ ನಾನೂ
ಬಣ್ಣ ತರಬಹುದೆಂದು
ನನ್ನ ಕನಸಿನ ಹಾಡು
ಕೇಳಿ
ನೀ ಹಗುರಾಗಬಹುದೆಂದು
ಭುಜಕ್ಕೆ ಭುಜ ಹಚ್ಚಿ
ಕಾಡ ದಾರಿಗಳನ್ನೆಲ್ಲ
ನಾಡ ಬೀದಿಗಳ ಮಾಡಬಹುದೆಂದು

೨. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

*ಆ. ಹತ್ತು ಪದಗಳಿಗೆ ಅರ್ಥ ಬರೆಯಿರಿ:* 10 x ½ = 05

ನನ್ನಿ, ಸಿಧೂದ್ಭವ, ಶೌರಿ, ಬಾಯ್ದಂಬುಲ, ಬಿಸಜಬಂಧು, ಹೇತು, ಕಯ್ದು, ಸ್ವಯಂಪ್ರಭೆ, ದೋರ್ದಂಡ, ಠಕ್ಕ, ಮೆದೆ, ಕಿಂಕರ, ಅಪದೆಸೆ, ಇಳೆ, ಖತಿ,

*ಇ. ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ:* 2 x 3 = 06

೧. ಮಂಗಳಮುಖಿ
೨. ನಳಕೂಬರ
೩. ರಾಮಕೃಷ್ಣಶಿವ
೪. ಅರ್ಧನಾರೀಶ್ವರ

**2.** *ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ:* 2 x 8 = 16

೧. ಕರ್ಣನ ವ್ಯಕ್ತಿತ್ವದ ಅನನ್ಯತೆಯನ್ನು ಕುಮಾರವ್ಯಾಸ ಕಟ್ಟಿಕೊಟ್ಟಿರುವ ಬಗೆಯನ್ನು ವಿವರಿಸಿ.

೨. 'ನಾಗಚಂದ್ರ ಚಿತ್ರಿಸಿರುವ ರಾವಣನ ವ್ಯಕ್ತಿತ್ವವು ಉದಾತ್ತವಾದದ್ದು' ಈ ಮಾತನ್ನು ಸಮರ್ಥಿಸಿ.

*ಮುಂದುವರೆದಿದೆ.............2*

https://www.kuvempuonline.com
https://www.kuvempuonline.com
https://www.kuvempuonline.com

https://www.kuvempuonline.com



೩. ಬಲಗೈ ಮುಟ್ಟಿ ಭಾಷೆ ಕೊಡಲು ನಿರಾಕರಿಸಿದ ಸಂಕಮ್ಮನ ಸ್ವಾಭಿಮಾನದ ನಿಲುವುಗಳನ್ನು ಚರ್ಚಿಸಿ.

೪. ಸಾಮಾನ್ಯ ವ್ಯಕ್ತಿಯೊಬ್ಬನ ವ್ಯಕ್ತಿತ್ವದಲ್ಲಿ ಅಡಕವಾಗಿರುವ ಮಿತಿ ಮತ್ತು ಶಕ್ತಿಗಳನ್ನು 'ನನ್ನ ಅವತಾರ' ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

**3. *ಮೂರು ಪ್ರಶ್ನೆಗಳಿಗೆ ಉತ್ತರಿಸಿ:*** 3 x 5 = 15

೧. ಪಂಪ ಮೆಚ್ಚಿದ ಮಹಾಭಾರತದ ಮೇರು ವ್ಯಕ್ತಿತ್ವಗಳಾವುವು? ವಿವರಿಸಿ.

೨. 'ಕರುಣಾಳು ಬಾ ಬೆಳಕೆ' ಕವಿತೆಯ ಆಶಯವನ್ನು ವಿವರಿಸಿ.

೩. ಚರಿತ್ರೆಯಲ್ಲಿ ಹೆಣ್ಣು ಕಡೆಗಣಿಸಲ್ಪಟ್ಟಿರುವ ಬಗೆಯನ್ನು 'ಚರಿತ್ರೆ ಮತ್ತು ಕವಿತೆ' ಕವನದ ಮೂಲಕ ಚರ್ಚಿಸಿ.

೪. ಸ್ನೇಹ ಬದುಕು ಹಾಗೂ ಸಂಪ್ರದಾಯದ ಚಿತ್ರಣ 'ನನ್ನ ನಮಾಜ್' ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ?

೫. 'ಅಹಲ್ಯೆ ಹೆಣ್ಣಿನ ಸ್ವಾಭಿಮಾನದ ಸಂಕೇತ' ಈ ಮಾತನ್ನು ಸುಕನ್ಯಾ ಮಾರುತಿಯವರ ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

೬. ಜಾತಿ ಹಿಂಸೆ ಮತ್ತು ಶೋಷಣೆ ಸಮಾಜದಲ್ಲಿ ನೆಲೆನಿಂತಿರುವುದನ್ನು 'ಬೂದಿ ಮಾತ್ರ ಬಿಟ್ಟುದಾ ಹೇಯುವ ಬಗೆಯನ್ನು' ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

**4. *ಎರಡು ಪ್ರಶ್ನೆಗಳಿಗೆ ಉತ್ತರಿಸಿ:*** 2 x 8 = 16

೧. ಬ್ರಹ್ಮಚರ್ಯ ಮತ್ತು ಸರಳ ಜೀವನವನ್ನು ಕುರಿತಂತೆ ಗಾಂಧೀಜಿಯವರ ನಿಲುವುಗಳನ್ನು ವಿವರಿಸಿ.

೨. ತಾಯಿಯ ಕೊನೆಯ ಬಯಕೆಗಳು ಬಿಚ್ಚಿದ ಜೋಳಿಗೆಯಲ್ಲಿ ಹೇಗೆ ಅನಾವರಣಗೊಂಡಿವೆ? ವಿವರಿಸಿ.

೩. ನಳಿನಿ ಜಮೀಲ ಸೆಕ್ಸ್ ವರ್ಕರ್ ಆಗಲು ಕಾರಣವಾದ ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ಬರೆಯಿರಿ.

೪. ಗಂಡಾಗಿ ಹುಟ್ಟಿ ಹೆಣ್ಣಾಗಿ ಬದಲಾದ ಮನಸ್ಸಿನ ತಲ್ಲಣಗಳನ್ನು ಶರವಣ ಪಾತ್ರದ ಹಿನ್ನೆಲೆಯಲ್ಲಿ ಚರ್ಚಿಸಿ.

**5. *ಎರಡು ಪ್ರಶ್ನೆಗಳಿಗೆ ಉತ್ತರಿಸಿ:*** 2 x 8 = 16

೧. ಕುವೆಂಪು ಅವರ ವೈಚಾರಿಕ ಆಲೋಚನೆಗಳ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.

೨. ಮೈಬಣ್ಣ ಸೌಂದರ್ಯದ ನಿರ್ಧಾರಕವೆ? ಲೋಹಿಯಾರವರ ಅಭಿಪ್ರಾಯದ ಹಿನ್ನೆಲೆಯಲ್ಲಿ ಚರ್ಚಿಸಿ.

೩. ಜಾತಿ ಪದ್ಧತಿಯನ್ನು ಕುರಿತು ಅಂಬೇಡ್ಕರ್ ನಿಲುವುಗಳೇನು? ವಿವರಿಸಿ.

೪. ಪ್ರಸ್ತುತ ಸಂದರ್ಭದಲ್ಲಿ ಹಸಿರು ಕಾಳಜಿಯ ಅಗತ್ಯತೆಯನ್ನು ಚಂದ್ರಶೇಖರ ನಂಗಲಿಯವರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

* * * * * * *

https://www.kuvempuonline.com

https://www.kuvempuonline.com

https://www.kuvempuonline.com